Smt. M. R. LAKSHAMMA.—Is it a residential one ?

Sri K. V. SHANKARA GOWDA.—Yes, Sir.

Smt. M. R. LAKSHAMMA.—If it is so, why not the Physical Instructors try to propogate ? I feel the proposition of the Sainik School has not been properly propogated. Why not the Physical Instructors be asked to find out which are the best boys who could be sent to Sainik Schools ?

Sri K. V. SHANKARA GOWDA.—That is a good suggestion and it will be examined.

Members' Representations

ಶ್ರೀ ಎ. ವೆಂಕಟಪ್ಪ (ವಿಧಾನಸಭಾ ಕ್ಷೇತ್ರ).—ಈಚೆಗೆ ಈ ಅಧಿವೇಶನದಲ್ಲಿ ನಾನೆತ್ತಿದು ದಿವಸಗಳಿಂದ ಈ ಸಭೆಯಲ್ಲಿ ಪ್ರಶ್ನೋತ್ತರಗಳು 15-20 ನಿಮಿಷಗಳಲ್ಲೇ ಮುಗಿದುಹೋಗುತ್ತವೆ. ನಾನು ಒಂದು ಪ್ರಶ್ನೆಯನ್ನು ಕಳುಹಿಸಿ 15 ದಿವಸಗಳಾದುವು. ಅದಕ್ಕೆ ಇನ್ನೂ ಉತ್ತರ ಬರಲಿಲ್ಲ. ಈ ಅಧಿವೇಶನ ಮುಗಿಯುವ ಕೊನೆಯ ದಿವಸಗಳಲ್ಲಿ ಒಂದು ದಿವಸಕ್ಕೆ 10-15 ಪ್ರಶ್ನೆಗಳು ಬರುವುದರಿಂದ ನಾವು ನಮ್ಮ ಪ್ರಶ್ನೆಗಳ ಪೇಲೆ ಸರಿಯಾಗಿ ಸಪ್ಲಿಮೆಂಟರಿ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶವಿರುವುದಿಲ್ಲ. ಅದಕ್ಕೋಸ್ಕರ ಸರ್ಕಾರದವರಿಗೆ ತಿಳಿಸಿ ಆದಷ್ಟು ಜಾಗ್ರತೆ ಪ್ರಶ್ನೆಗಳಿಗೆ ಉತ್ತರಗಳನ್ನು ತರಿಸಬೇಕೆಂದು ನಾನು ಸಭಾಪತಿಯವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಏತಕ್ಕೆಂದರೆ ವಿಷಯಗಳು ಬಿಸಿ ಬಿಸಿಯಾಗಿದ್ದಾಗ ಪ್ರಶ್ನೆಗಳನ್ನು ಕೇಳಿದರೆ ಬಿಸಿ ಬಿಸಿಯಾಗಿರುತ್ತದೆ. ಈಗ ಭಾಷಾ ಪ್ರಶ್ನೆ ಇದೆ. ಅದಕ್ಕೆ ಸಂಬಂಧಪಟ್ಟ ಪ್ರಶ್ನೆಯನ್ನು ಈ ಸಮಯದಲ್ಲಿ ಕೇಳಿದರೆ ಬಿಸಿ ಬಿಸಿಯಾಗಿರುತ್ತದೆ. ಬಿಸಿ ಬೇಳೆ ಬಾತನ್ನು ಬಿಸಿಯಾಗಿರುವಾಗ ತಿಂದರೆ ಚೆನ್ನಾಗಿರುತ್ತದೆಯೇ ವಿನಾ ಅದನ್ನು ಆರಿದಮೇಲೆ ತಿಂದರೆ ಚೆನ್ನಾಗಿರುವುದಿಲ್ಲ. ಆದ್ದರಿಂದ ಆದಷ್ಟು ಬೇಗನೆ ಪ್ರಶ್ನೆಗಳಿಗೆ ಉತ್ತರಗಳನ್ನು ತರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸಭಾಪತಿಯವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ (ವಿಧಾನಸಭಾ ಕ್ಷೇತ್ರ).—ಸ್ವಾಮಿ, ಸತ್ರಿಕೆಯಲ್ಲಿ ಪ್ರಕಟವಾಗಿರುವ ರೀತಿಯಲ್ಲಿ ಭಾಷಾ ಸಮಸ್ಯೆಯ ವಿಚಾರದಲ್ಲಿ ಮಾನ್ಯ ಲೀಡರ್ ಅವರು ಹೇಳಿದ್ದಾರೆ, ಮಾನ್ಯ ವಿದ್ಯಾಮಂತ್ರಿಗಳು ಅತಿಶೀಘ್ರವಾಗಿ ಸರ್ಕಾರದ ಪರವಾಗಿ ಒಂದು ನಿರ್ಣಯವನ್ನು ಉಭಯ ಸದನಗಳಲ್ಲೂ ಮಂಡನೆ ಮಾಡುತ್ತಾರೆಂದು. ಎಷ್ಟು ದಿವಸಗಳಲ್ಲಿ ಅದನ್ನು ಈ ಸಭೆಯ ಮುಂದೆ ಮಂಡಿಸಬೇಕೆಂದು ಉದ್ದೇಶವಿದೆ ಎಂಬುದನ್ನು ದಯವಿಟ್ಟು ತಿಳಿಸಬೇಕು. ಮತ್ತು ಆಂಧ್ರ ಶಾಸನ ಸಭೆಯಲ್ಲಿ ಆಂಧ್ರದ ಮುಖ್ಯ ಮಂತ್ರಿಗಳು ಶ್ರದ್ಧೆ ವಹಿಸಿ ಈ ಭಾಷಾ ಸಮಸ್ಯೆಯ ವಿಚಾರದಲ್ಲಿ ಒಂದು ನಿರ್ಣಯವನ್ನು ಮಂಡಿಸಿ ಅದನ್ನು ಅಲ್ಲಿ ಉಭಯ ಸದನಗಳೂ ಒಪ್ಪಿಕೊಂಡಿವೆ. ಅದನ್ನು ಅನುಸರಿಸಿ ಇಲ್ಲಿಯೂ ಪ್ರೈಸೂರು ಸರ್ಕಾರದವರು ಭಾಷಾ ಸಮಸ್ಯೆಯ ಬಗ್ಗೆ ಒಂದು ಕ್ರಮವನ್ನು ಅನುಸರಿಸುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ (ವಿದ್ಯಾಶಾಖೆಯ ಮಂತ್ರಿಗಳು).—ಈಗ ಅಂಥಾದ್ದು ಒಂದು ನಿರ್ಣಯವನ್ನು ಸಭೆಯ ಮುಂದೆ ತರಬೇಕು ಎನ್ನುವ ವಿಷಯ ಪರಿಶೀಲನೆಯಾಗುತ್ತಿದೆ. ಅದಕ್ಕಾಗಿ ಸರ್ಕಾರದ ಪರವಾಗಿ ಒಂದು ನಿರ್ಣಯವನ್ನು ತರುವುದಕ್ಕೆ ಕಾಲಾವಕಾಶವಿಲ್ಲ. ಆದ್ದರಿಂದ ಒಂದು ನಾನ್ ಆಫಿಷಿಯಲ್ ರೆಸಲ್ಯೂಷನ್ ತರುವುದಕ್ಕೆ ಅವಕಾಶವಿದೆಯೇ ಎಂಬುದನ್ನು ಪರಿಶೀಲನೆ ಮಾಡಿ ಯಾವುದಾದರೂ ರೂಪದಲ್ಲಿ ಒಂದು ನಿರ್ಣಯ ಈ ಸಭೆಯ ಮುಂದೆ ಬರುತ್ತದೆಂದು ನನಗೆ ಅನಿಸುತ್ತದೆ.

ಶ್ರೀ ವೈ. ಎಸ್. ಪಾಟೀಲ್.—ಕಪ್ ಅವಾರ್ಡನ್ನು ಒಪ್ಪಿಕೊಳ್ಳಬಾರದು ಎನ್ನುವ ಬಗ್ಗೆ ಈ ಸಭೆಯಲ್ಲಿ ಒಂದು ನಿರ್ಣಯವನ್ನು ತರಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. DEPUTY CHAIRMAN.—It will not come within the competence of this House.

Sri M. C. NARASIMHAN (Legislative Assembly Constituency).—Sir, I have given notice of a Motion.

2-45 P.M.

Mr. DEPUTY CHAIRMAN.—It will be examined. The Legislature Secretariat has received 198 questions, but we have not received replies from the Government.

Sri M. P. L. SASTRY (Nominated).—Should we wait for the replies or should the Chairman or the Presiding Officer insist upon the Government to send the replies ?

Mr. DEPUTY CHAIRMAN.—We have already taken steps.

ಶ್ರೀ ಎಂ. ವಿ. ವೆಂಕಟಪ್ಪ (ಪದವೀಧರರ ಕ್ಷೇತ್ರ).—ಆದಷ್ಟು ಬೇಗ ಪ್ರಶ್ನೆಗಳಿಗೆ ಉತ್ತರ ಗಳನ್ನು ತರಿಸಬೇಕು. ನನ್ನ ಕೆಲವು ಪ್ರಶ್ನೆಗಳಿಗೆ ಸೆಕ್ರೆಟೇರಿಯಟ್‌ನಲ್ಲಿಯೇ ಅರ್ಧ ಗಂಟೆಯಲ್ಲಿ ಉತ್ತರಗಳನ್ನು ತರಿಸಬಹುದು. ಆದರೂ ಸಹ ಉತ್ತರಗಳು ಬಂದಿಲ್ಲ.

Mr. DEPUTY CHAIRMAN.—Steps will be taken to move the Government to send the replies early.

ಶ್ರೀಮತಿ ಎಂ. ಆರ್. ಲಕ್ಷಮ್ಮ (ಪದವೀಧರರ ಕ್ಷೇತ್ರ).—ಕಳೆ ಮನೆಯಲ್ಲಿ ಒಂದು ದಿವಸಕ್ಕೆ 8-10 ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆಯುತ್ತಾರೆ. ಇಲ್ಲಿ ಮಾತ್ರ ಒಂದೆರಡು ಪ್ರಶ್ನೆಗಳಿಗೆ ಮಾತ್ರ ಉತ್ತರ ಬರುತ್ತದೆ. ಈ ರೀತಿ ಕಡಿಮೆಯಾಗುವುದಕ್ಕೆ ಕಾರಣವೇನು ? ಆದ್ದರಿಂದ ಇಲ್ಲಿಯೂ ಕೂಡ ಜಾಸ್ತಿ ಪ್ರಶ್ನೆಗಳಿಗೆ ಉತ್ತರ ಬರುವ ಹಾಗೆ ತಾವು ದಯವಿಟ್ಟು ಏರ್ಪಾಡು ಮಾಡ ಬೇಕು.

ಶ್ರೀ ಜಿ. ವಿ. ಆಂಜನಪ್ಪ (ಪದವೀಧರರ ಕ್ಷೇತ್ರ).—ತಾವು ಸರ್ಕಾರದವರಿಗೆ ಮೈಲ್ಡ್ ಆಗಿ ಹೇಳಿದರೆ ಆಗುವುದಿಲ್ಲ. ಸ್ವಲ್ಪ ಭೀಮಾರಿ ಮಾಡಬೇಕು. ಆಗ ಅವರು ಉತ್ತರವನ್ನು ಕಳುಹಿಸು ತ್ತಾರೆ. ಇಲ್ಲದೇ ಹೋದರೆ ಬಂಗಡಿಯನ್ನು ಬಂದ್ ಮಾಡಿ ಓಡಿ ಎಂದರೆ ಈ ಸಭೆಯನ್ನು ಬಂದ್ ಮಾಡಿ ಬಿಡಿ. ಪ್ರಶ್ನೆಗಳಿಗೆ ಸರಿಯಾಗಿ ಸರ್ಕಾರದವರು ಉತ್ತರವನ್ನು ಕಳುಹಿಸುವುದಕ್ಕೆ ಕ್ರಮ ತೆಗೆದುಕೊಳ್ಳದಿದ್ದರೆ ನಿಜವಾಗಿಯೂ ಇದು ಬಹಳ ವಿಷಾದಕರವಾದ ಸಂಗತಿ. ಈ ಬಗ್ಗೆ ಸರ್ಕಾರ ದವರು ಕ್ರಮ ತೆಗೆದುಕೊಳ್ಳದಿದ್ದರೆ ಮುಂದೆ ಯಾವ ರೀತಿ ಮಾಡಬೇಕೆಂಬುದನ್ನು ಬೇರೆ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಂ. ಸಿ. ನರಸಿಂಹನ್.—ಈಗ 3 ದಿವಸಗಳಿಂದ ಶ್ರೀಮಾನ್ ಮಲ್ಲಾರಾಧ್ಯರ ಪ್ರಶ್ನೆಯೇ ಬರುತ್ತಿದೆ. ನನ್ನದು ಯಾಕೆ ಬರುವುದಿಲ್ಲ ?

ಶ್ರೀ ಜಿ. ವಿ. ಆಂಜನಪ್ಪ.—ಈಗ ಮೂರು ದಿವಸಗಳಿಂದ ವಿದ್ಯಾ ಮಂತ್ರಿಗಳ ಹೊರತು ಬೇರೆ ಯಾವ ಮಂತ್ರಿಗಳೂ ಈ ಸಭೆಗೆ ಬರುವುದಿಲ್ಲ. ಅವರ ಮುಖಗಳನ್ನು ನೋಡಲೂ ಇಲ್ಲ. ನಮ್ಮ ಪ್ರಶ್ನೆಗಳಿಗೆ ಉತ್ತರ ಬಂದರೆ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳ ದರ್ಶನವನ್ನು ಪಡೆಯುವ ಲಾಭ ವಾದರೂ ಬರುತ್ತದೆ.

Sri M. P. L. SASTRY.—I wish to submit to the Chair that some of the questions have been answered. There are allied questions relating to the very same matter sent by the other members. All those questions could have been usefully taken up, at least one per day, and the time of the House could have been saved. Would the Chair kindly see that those questions are grouped together if they are inter-related and are taken together ?

Mr. DEPUTY CHAIRMAN.—I request the hon'ble the Leader of the House to take a note of these suggestions and see that they are expedited.